ಸದರೀ ದರಖಾಸ್ತುದಾರರಾದ ರಾಮಸ್ವಾಮಯ್ಯನವರ ಅರ್ಜೀಯನ್ನು 1887ನೇ ಇಸವಿ ಏಪ್ರಿಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟ್ಟಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 118.

ಮೃತಪಟ್ಟ ನಾಗಂಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಪದ್ಮರಾಜಯ್ಯನವರು, ಮೃತಪಟ್ಟ ಸದರೀ ನಾಗಂಣನವರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಸಾಲಿಗ್ರಾಮದ ಸ್ಥಳದ ಸದರೀ ಪದ್ಮರಾಜಯ್ಯನವರು ಸದರೀ ವಾಸಸ್ಥರಾಗಿ ಮೃತಪಟ್ಟ ನಾಗಂಣನವರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ್ರಮೇರಿಗೆ ಸರ್ಟಿಫಿಕೇಟ್ ಬಗ್ಯೈಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪದ್ಮರಾಜಯ್ಯನವರ ಅರ್ಜೀಯನ್ನು 1887ನೇ ಇಸವಿ ಏಪ್ರಿಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗಂಣನವರ ಆಸ್ತಿಗೆ, ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 119.

ಮೃತಪಟ್ಟ ಗುಂಡಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಶಾಂತಮ್ಮನವರು ಮೃತಪಟ್ಟ ಸದರೀ ಗುಂಡಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ಮೊಹಲಾ ಸ್ಥಳದ ಸದರೀ ಶಾಂತಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ಗುಂಡಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ ಮೇರಿಗೆ ಸರ್ಟಿಫಿಕೇಟ್ ಬಗ್ಯೈ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಾಂತಮ್ಮನವರ ಅರ್ಜಿಯನ್ನು 1887ನೇ ಇಸವಿ ಏಪ್ರಿಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುಂಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಾರ್ಚಿ ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಸಬ್ ಜಡ್ಜೀಯವರ ಕೋರ್ಟನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಯಿಡತೊರೆ ತಾಲ್ಲೂಕು ಸಾಲಿಗ್ರಾಮದಲ್ಲಿರುವ ಗಂಗಯ್ಯನ ಮಗ ಸೂರ್ಯನಾರಣಯ್ಯನ ವಿಷಯದಲ್ಲಿ—

ಸ್ಯ 1886ನೇ ಇಸವಿ ದಿವಾಳಿ ಕೇಸ್ ನಂಬರ್ 133.

ಹುಕ್ಕುಂ.

ಮೇಲ್ಕಂಡ ಸೂರ್ಯನಾರಣಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಸೂರ್ಯನಾರಣಯ್ಯ ಖುದ್ದು ಹಾಜರು ಮತ್ತು ಸದರೀಯವನ ಲೇಣೇದಾರ್ರಾದ 3ನೇ ಜಯಂಣನ ಕಡೆ ಫರ್ಸ್ಟ್ಗ್ರೆಡ್ ಪ್ಲೀಡರ್ ರಾಮಂಣನವರು 2ನೇ ಚಂನಪ್ಪಯ್ಯ 8ನೇ ಕೃಷ್ಣಪ್ಪ ಇವರ ಕಡೆ ಪ್ಲೀಡರ್ ನಾರಾಯಣರಾವ್ 1ನೇ ವಂಕಟಸುಬ್ಬಯ್ಯ 6ನೇ ನಾರಣಪ್ಪ 4ನೇ ರಾಮಂಣ 5ನೇ ಕಾಳಪ್ಪ ಖುದ್ದು ಹಾಜರು ಯಿವರಿಗೂ ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—7ನೇ ಹನುಮಂತಪ್ಪ 9ನೇ ಬ್ರಹ್ಮದೇವಯ್ಯ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಸೂರ್ಯನಾರಣಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1887ನೇ ಇಸವಿ ಫಿಬ್ರುವರೀ 26ನೇ ತಾರೀಖಿನಲ್ಲಿ ಈ ಕೋರ್ಟು ವೇ.ಹರ್ ನಮ್ಮ ದಸ್ತಖತ್‌ನಿಸೀ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಲಗಳು.	ಗಿ. ಸಿ. ಮಾಡಿದ್ದಕ್ಕೆ	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ರೂ.
1	ರುದ್ರಪಟ್ಣದಲ್ಲಿರುವ ವೆಂಕಟಸುಬ್ಬಯ್ಯ ..	400		ಆಧಾರದ ತಮಸೂಕು ಬಾಬತು	
2	ಸಾಲಿಗ್ರಾಮದಲ್ಲಿರುವ ಚನ್ನಪ್ಪಯ್ಯ ..	600		ಆಧಾರ ಭೋಗ್ಯದ ತಮಸೂಕು ಬಾಬತು	
3	ಡಿಟೋ ಗ್ರಾಮದ ಜಯಂಣ ..	800 1 3		ಡಿಕ್ರೀ ಬಾಬತು	
4	ಸಾಲಿಗ್ರಾಮದಲ್ಲಿರುವ ಕೃಷ್ಣಪ್ಪ ..	1,000		ಆಧಾರದ ತಮಸೂಕು ಬಾಬತು	
		2800 1 3			

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ.

ಹಾಸನ ಡಿಸ್ಟ್ರಿಕ್ಟು.

ಹೊಳೇನರಸೀಪುರದ ಸಬ್ ಡಿವಿಜ್ಞ ಮುನಸಿಫ್ ಕೋರ್ಟಿನಲ್ಲಿ.

ಸ್ಯ 1886ನೇ ಇಸವಿ ಸಿವಿಲ್ ನಂಬರ್ 732.

ವಾದಿ.

ಹೊಳೇನರಸೀಪುರದ ಕಸಬು ಹೋಬಳಿ ನಾಗಲಪುರದಲ್ಲಿ ಇರುವ ಈರೇಗವ್ವಜನ ಮಗ ಬಸವೇಗವ್ವಜ.

ಪ್ರತಿವಾದೀರು.

1ನೇ ಬಳ್ಳಾರಿ ಜಿಲ್ಲಾ ನಾರಾಯಣದೇವರ ಕೆರೆಯಲ್ಲಿರುವ ಮುಕುಂದಭಟ್ಟ ರತೀರಮಣಾಚಾರ್, ದೌಹಿತ್ರ, ಮತ್ತು ಮೃತಪಟ್ಟ ಹೊಳೇನರಸೀಪುರದ ಕುರಡಿ ರಾಮಾಚಾರ್ ಹೆಂಡತಿ ಹನುಮಂತಬಾಯಿ ಪುರಫ್ ಕಮಲಾಬಾಯಿ

2ನೇ ಹೊಳೇನರಸೀಪುರದಲ್ಲಿರುವ ಸಾವಿತ್ರಮ್ಮ.

ಮೇಲೆ ಹೇಳಿರುವ 1ನೇ ಪ್ರತಿವಾದೀಗೆ— ಮೇಲ್ಕಂಡ ವಾದಿ ಬಸವೇಗವ್ವಜನು, ಮೃತಪಟ್ಟ ನಿಮ್ಮ ಗಂಡ ಬರದುಕೊಟ್ಟು ಇರುವ ಧಾಫಾ ತಮಸೂಕು ಬಾಬತು 118—12—3 ಪೈಗಳನ್ನ ಬರಮಾಡಿಸಿಕೊಡಬೇಕೆಂದು ನಿಮ್ಮ ಮೇಲೆ ವ್ಯಾಜ್ಯ ತಂದಿರುತ್ತಾರಾಗಿ ಈ ಕೋರ್ಟಿನಲ್ಲಿ ನೀವಾಗಲಿ, ಈ ವ್ಯಾಜ್ಯಕ್ಕೆ ಸಂಬಂಧಿಸಿದ ಮುಖ್ಯಗಳಾದ ದರೋಬಸ್ತು ಅಂಶಗಳಿಗೂ ಜವಾಬ್ ಹೇಳಲಿಕ್ಕೆ ಕ್ರಮಪ್ರಕಾರ ತಿಳಿಸಲ್ಪಟ್ಟ ಮತ್ತು ಸಮರ್ಥರಾದ ಅಥವಾ ಅಂಥಾ ದರೋಬಸ್ತು ಅಂಶಗಳಿಗೂ ಜವಾಬ್ ಹೇಳಲಿಕ್ಕೆ ಸಮರ್ಥನಾದ ಯಾವನಾದರೂ ಬಬ್ಬ ಇತರ ಮನುಷ್ಯನ ಸಂಗಡ ಬರುವ ಬಬ್ಬ ವಕೀಲನ ಮೂಲಕವಾಗಲಿ, ಸದರೀ ವಾದೀಗೆ ಜವಾಬ್ ಹೇಳಲಿಕ್ಕೆ ಈ ಕೋರ್ಟಿನಲ್ಲಿ ಸ್ಯ 1887ನೇ ಇಸವಿ ಮಾರ್ಚೀ 28ನೇ ಮಂಗಳವಾರ ಬೆಳಿಗ್ಗೆ 11 ಘಂಟೆಗೆ ಹಾಜರಾಗುವಂತೆ ಇದರ ದೆಸೆಯಿಂದ ನೀವು ಸಮ್ಮನ್ ಮಾಡಲ್ಪಟ್ಟಿರುವದಲ್ಲದೆ ಮೇಲೆ ನಮೂದಿಸಲ್ಪಟ್ಟ ದಿನದಲ್ಲಿ ನೀವು ಹಾಜರಾಗದೆ ಹೋದಲ್ಲಿ ನಿಮ್ಮ ಗೈರ್ ಹಾಜರಿಯಲ್ಲಿ ಎಕ್ಸ್‌ಪಾರ್ಟಿಯಾಗಿ ಇಷ್ಯು ಮಾಡಲ್ಪಡುವದು.

ಸ್ಯ 1887ನೇ ಇಸವಿ ಮಾರ್ಚೀ ಮಾಹೆ 8ನೇ ಮಂಗಳವಾರದಲ್ಲಿ ನಮ್ಮ ದಸ್ತಖತ್ತುನಿಸೀ ಕೊಡಲ್ಪಟ್ಟಿತು.

ಸಿ. ಸುಬ್ಬರಾವ್,
ಮುನಸಿಫ್.